Date :25-4-2016

# ಬೇಳೆಕಾಳು ಆಮದು ಇಳಿಮುಖ

ದೇಶದಲ್ಲಿ ಬೇಳೆಕಾಳು ಆಮದು ಪ್ರಮಾಣ ಇಳಿಮುಖವಾಗುತ್ತಿದ್ದು, ಎಪ್ರಿಲ್ 17ಕ್ಕೆ ಕೊನೆಗೊಂಡ ವಾರದಲ್ಲಿ ಸುಮಾರು 81000 ಟನ್‌ಗಳಷ್ಟು ಬೇಳೆಕಾಳು ಆಮದು ಮಾಡಲಾಗಿದೆ ಎಂದು ವರದಿಯಾಗಿದೆ. ಇದು ಹಿಂದಿನ ವಾರದಲ್ಲಿ ಆಮದು ಮಾಡಲಾದ ಬೇಳೆಕಾಳು ಪ್ರಮಾಣಕ್ಕಿಂತ ಶೇ7ರಷ್ಟು ಕಡಿಮೆಯಾಗಿದೆ.

# ಬೇಳೆಕಾಳು ಬೆಲೆ ನಿಯಂತ್ರಣ

ಮಹಾರಾಷ್ಟ್ರದಲ್ಲಿ ಬೇಳೆಕಾಳು ಬೆಲೆ ನಿಯಂತ್ರಣಕ್ಕಾಗಿ ಸರಕಾರ ಮಸೂದೆಯೊಂದನ್ನು ಅಂಗೀಕರಿಸಿದ್ದು, ರಾಷ್ಟ್ರಪತಿಗಳ ಅಂಕಿತಕ್ಕಾಗಿ ನಿರೀಕ್ಷಿಸಲಾಗುತ್ತಿದೆ. ಮಸೂದೆಯನ್ವಯ ಮಹಾನಗರ, ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ವಿಭಿನ್ನ ಧಾರಣೆಗಳನ್ನು ವಿಧಿಸಲಾಗುತ್ತಿದೆ.